**CC No. 61/2017**

**ದಿನಾಂಕಃ 05.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ (ಇನ್ ಕ್ಯಾಮರಾ ವ್ಯವಹರಣೆ)**

ದಿ.13.10.2014 ರಂದು ಅಂಚೆ ಮುಖೇನ ನಮ್ಮ ಕಚೇರಿಗೆ ಒಂದು ಪತ್ರ ಬಂದಿತ್ತು. ಸದರಿ ಪತ್ರ ನನ್ನ ಹೆಸರಿಗೆ ಬಂದಿತ್ತು. ಶಿವಪ್ರಸಾದ್ ಎನ್ನುವವರ ಹೆಸರಿನಿಂದ ನನಗೆ ಪತ್ರ ಬಂದಿತ್ತು. ಅದನ್ನು ನಾನು ತೆಗೆದು ನೋಡಿದೆನು. ಸದರಿ ಪತ್ರ ನೋಡಿದಾಗ ಅದರಲ್ಲಿ ಒಂದು ಮೆಮೋರಿ ಕಾರ್ಡ್ ಇತ್ತು . ಸದರಿ ಮೆಮೋರಿ ಕಾರ್ಡ್ ಮೈಕ್ರೋ ಎಮ್ ಕ್ರಾಸ್ ಹೆಸರಿನದ್ದಾಗಿತ್ತು. ಅದನ್ನು ತೆರೆದು ನೋಡಿದಾಗ ಅದರಲ್ಲಿ ಒಂದು ಹುಡುಗ ಮತ್ತು ಹುಡುಗಿ ಲೈಂಗಿಕ ಕ್ರಿಯೆ ನಡೆಸುವ ಅಶ್ಲೀಲ ಚಿತ್ರಗಳು ಇದ್ದವು. ಸದರಿ ಮೆಮೋರಿ ಕಾರ್ಡ್ನಲ್ಲಿ ಇದ್ದ ಚಿತ್ರಗಳಲ್ಲಿ ನನ್ನ ಹೆಂಡತಿಯ ಹಳೆಯ ಫೋಟೋದ ಮುಖವನ್ನು ಬಿಂಬಿಸಲಾಗಿತ್ತು.

ದಿ.**25.11.2014** ರಂದು ಮತ್ತೊಂದು ಪತ್ರ ನನ್ನ ಹೆಸರಿಗೆ ಬಂತು. ಅದನ್ನು ಪ್ರವೀಣ ನಾಯ್ಕ ಎನ್ನುವವರು ಕಳುಹಿಸಿದ್ದ ಬಗ್ಗೆ ನಮೂದಾಗಿತ್ತು. ಸದರಿ ಪತ್ರ **3** ಪುಟಗಳಾದ್ದಾಗಿದ್ದು ಅದರಲ್ಲಿ ನನ್ನ ಹೆಂಡತಿಯ ಬಗ್ಗೆ ಅಶ್ಲೀಲವಾಗಿ ಬರೆಯಲಾಗಿತ್ತು. ದಿ.**02.01.2015** ರಂದು ನನ್ನ ಹೆಸರಿಗೆ ಮತ್ತೊಂದು ಪತ್ರ ಬಂದಿತ್ತು. ಅದರಲ್ಲಿ **3** ಪುಟಗಳ ಪತ್ರದೊಂದಿಗೆ ಒಂದು ಸಿ.ಡಿ ಸಹ ಇತ್ತು. ಪತ್ರದಲ್ಲಿ ನನ್ನ ಹೆಂಡತಿಯ ಬಗ್ಗೆ ಅಶ್ಲೀಲವಾಗಿ ಬರೆದು ಮರಾಠಿ ಸಂಘಕ್ಕೆ ಕಳುಹಿಸಿ ನನ್ನ ಹೆಂಡತಿಯ ಮಾನಹಾನಿಯಾಗುವಂತೆ ಮಾಡುತ್ತೇವೆ ಎಂದು ಬೆದರಿಕೆ ಹಾಕಲಾಗಿತ್ತು. ಸದರಿ ಪತ್ರ ಶಿವಪ್ರಸಾದ್ ಎನ್ನುವವರ ಹೆಸರಿನಿಂದ ಬಂದಿತ್ತು. ನಾನು ಮೇಲೆ ತಿಳಿಸಿದ ಎಲ್ಲಾ ಪತ್ರಗಳು ನಾನು ಕೆಲಸ ಮಾಡುವ ನಗರ ಸಭೆ ಕಚೇರಿಗೆ ಬಂದಿದ್ದವು.

ದಿ. 14.02.2015 ರಂದು ನನ್ನ ಮೊಬೈಲ್ ಸಂ.9964693453ಗೆ ಮೊಬೈಲ್ ಸಂ. ಕೊನೆಯ ಅಂಕಿಗಳು 6955 ರಿಂದ ಫೋನ್ ಕರೆ ಬಂದಿತ್ತು. ಫೋನ್ ಕರೆ ಮಾಡಿದ ವ್ಯಕ್ತಿ ನನ್ನ ಹೆಂಡತಿಯನ್ನು ಕೇಳಿದನು, ನಾನು ಫೋನ್ ತೆಗೆದು ಮಾತನಾಡಿದ್ದೆನು. ಆ ಸಮಯದಲ್ಲಿ ಕರೆಮಾಡಿದ ವ್ಯಕ್ತಿ ನಿಮ್ಮದು ಎಲ್ಲಾ ಗೊತ್ತಾಗಿದೆ, ವಾಲ್ ಪೋಸ್ಟರ್ ನಲ್ಲಿ ಅಂಟಿಸಿದ್ದೇವೆ ಎಂದು ಹೇಳಿದ್ದು ನಾನು ನೀವು ಯಾರು ಎಂದು ಕೇಳಿದ್ದಕ್ಕೆ ಫೋನ್ ಕರೆಯನ್ನು ಕಟ್ ಮಾಡಿದರು.

ಮರುದಿನ ನನ್ನ ಹೆಂಡತಿಯ ತಂದೆ ಮತ್ತು ಅವರ ಸಂಬಂಧಿಕರು ಬೆಟ್ಟಂಪಾಡಿ ಬಸ್ ನಿಲ್ದಾಣದ ಹತ್ತಿರ ಬರುವಾಗ ಅಲ್ಲಿ ಗೋಡೆಗೆ ಮೆಮೋರಿ ಕಾರ್ಡ್ನಲ್ಲಿ ಇದ್ದಂತಹ ಫೋಟೋವನ್ನು ಅಂಟಿಸಿದ್ದನ್ನು ನೋಡಿರುತ್ತಾರೆ. ಅದರಲ್ಲಿ ನನ್ನ ಹೆಂಡತಿ ಪೂರ್ಣಿಮ ಲೋಕೇಶ್, ಪ್ರಸನ್ನ ಮತ್ತು ಶಶಿಕಲಾ ರವರ ಹೆಸರನ್ನು ನಮೂದು ಮಾಡಿ ಅವರ ಫೋನ್ ನಂ.ಗಳನ್ನು ಹಾಕಿದ್ದರು. ಆನಂತರ ಅದೇ ದಿನ ಸಂಜೆ ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ ನನ್ನ ಹೆಂಡತಿ ದೂರನ್ನು ಕೊಟ್ಟಿರುತ್ತಾಳೆ. ಪೋಲೀಸರು ಘಟನೆಯ ಸಂಬಂಧ ನನ್ನ ವಿಚಾರಣೆ ಮಾಡಿದ್ದಾರೆ.

ಆ ಸಮಯದಲ್ಲಿ ನನ್ನ ಹೆಂಡತಿ ವಿಟ್ಲದ ಡಿಗ್ರಿ ಕಾಲೇಜಿನಲ್ಲಿ ಬಿ ಕಾಂ ಓದುತ್ತಿದ್ದಳು. ಅದಕ್ಕೂ ಮುಂಚೆ ಬೆಟ್ಟಂಪಾಡಿ ಕಾಲೇಜಿನಲ್ಲಿ ಒಂದು ವರ್ಷ ಓದಿರುತ್ತಾಳೆ. ಬೆಟ್ಟಂಪಾಡಿ ಕಾಲೇಜಿನಲ್ಲಿ ನನ್ನ ಹೆಂಡತಿ ಓದುವಾಗ ಗಣೇಶ್ ಎಂಬುವವನು ಅಂತಿಮ ವರ್ಷದ ಡಿಗ್ರಿ ಓದುತ್ತಿದ್ದನು. ಆ ಸಮಯದಲ್ಲಿ ನನ್ನ ಹೆಂಡತಿಯನ್ನು ಆತ ತನ್ನ ಮನೆಯ ಕೆಲವು ಕಾರ್ಯಕ್ರಮಗಳಿಗೆ ಕರೆದಿದ್ದನು. ನನ್ನ ಹೆಂಡತಿ ಆತ ಹೇಳಿದ ಕಾರ್ಯಕ್ರಮಗಳಿಗೇ ಹೋಗದೇ ಇದ್ದ ಕಾರಣ ಆತ ನನ್ನ ಹೆಂಡತಿಯ ಮೇಲೆ ದ್ವೇಷ ಬೆಳೆಸಿಕೊಂಡಿದ್ದನು. ಮದುವೆಯ ಸಮಯದಲ್ಲಿ ನಿನ್ನನ್ನು ಮದುವೆಯಾಗಲು ಬಿಡುವುದಿಲ್ಲ ಅಕಸ್ಮಾತ್ ಮದುವೆಯಾದರೂ ನೆಮ್ಮದಿಯಾಗಿ ಇರಲು ಬಿಡುವುದಿಲ್ಲ, ಮದುವೆಯಾದರೆ ಜೀವಂತವಾಗಿ ಬದುಕಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದನು. ಸದರಿ ವಿಚಾರವನ್ನು ನನ್ನ ಹೆಂಡತಿ ತಿಳಿಸಿದ್ದಳು.

ಆನಂತರ ಪೋಲೀಸರು ನನ್ನನ್ನು ಕರೆದು ನನ್ನ ಮರುಹೇಳಿಕೆ ಪಡೆದಿದ್ದಾರೆ. ಮೇಲೆ ತಿಳಿಸಿದ ಕೃತ್ಯಗಳನ್ನು ಗಣೇಶನೇ ಮಾಡಿದ್ದಾನೆ ಎಂದು ಹೇಳಿಕೆ ನೀಡಿದ್ದೇನೆ.

ದಿ. 14.02.2015 ರಂದು ನನ್ನ ಮೊಬೈಲ್ ಸಂ.9964693453ಗೆ ಕಿರಣ್ ಕುಮಾರ್ ಎನ್ನುವವರ ಹೆಸರಿನಲ್ಲಿದ್ದ ಬಿದ್ದು ಸಿಕ್ಕಿದ ಸಿಮ್ ಕಾರ್ಡ್ ನಿಂದ ತಿಮ್ಮಪ್ಪ ಎನ್ನುವವರು ನನಗೆ ಕರೆ ಮಾಡಿದ್ದರು ಎಂದು ಗೊತ್ತಾಗಿರುತ್ತದೆ.

ನಾನು ತಿಳಿಸಿದ ಗಣೇಶ್ ಎನ್ನುವ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿಹಾಜರಿರುತ್ತಾರೆ. ನನಗೆ ಕರೆ ಮಾಡಿದ್ದ ತಿಮ್ಮಪ್ಪ ಎಂಬ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ತಿಮ್ಮಪ್ಪ ಈ ದಿನ ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಏನೂ ಇಲ್ಲ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ಒಂದು ಮಹಜರ್ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಮಹಜರನ್ನು ನಿಪಿ.7 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. ನಿಪಿ.7 ಕ್ಕೆ ನಾನು ದಿ.17.02.2015 ರಂದು ಸಂಪ್ಯ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೋಲೀಸರು ಮಹಜರ್ ಕಾಲದಲ್ಲಿ ನನಗೆ ಅಂಚೆ ಮುಖೇನ ಬಂದ ಮೆಮೋರಿ ಕಾರ್ಡ್, 2 ಪತ್ರಗಳು, ಒಂದು ಸಿ.ಡಿ. ಯನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ಸಂಗಡ ಧನಂಜಯ ಮತ್ತು ಮನೋಹರ ರೈ ಎನ್ನುವವರು ಸಹ ಇದ್ದರು. ಮಹಜರ್ ಕಾಲದಲ್ಲಿ ಪೋಲೀಸರು ತಮ್ಮ ವಶಕ್ಕೆ ಪಡೆದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಃ ಮೆಮೋರಿ ಕಾರ್ಡ್, ಪತ್ರಗಳು ಹಾಗೂ ಸಿಡಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು.7, ಮುದ್ದೆಮಾಲು.1 ಮತ್ತು 2, ಮುದ್ದೆಮಾಲು.9 ಎಂದು ಗುರುತಿಸಲಾಗಿರುತ್ತದೆ.

ಬಸ್ ನಿಲ್ದಾಣದಲ್ಲಿ ಅಂಟಿಸಲಾಗಿದ್ದ ಭಾವಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆಮಾಲು.10 ಎಂದು ಗುರುತಿಸಲಾಗಿದೆ. ದಿ.13.04.2015 ರಂದು ಪೋಲೀಸಿನವರು ನನಗೆ ಒಂದು ನನ್ನ ಹೆಂಡತಿಯ ಒಂದು ಭಾವಚಿತ್ರ ಹಾಗೂ ಒಂದು ಸಿ ಡಿ ಯನ್ನು ಕಾಪಿ ಮಾಡಿ ಕೊಡುವಂತೆ ತಿಳಿಸಿದ್ದರು. ನನ್ನ ಹತ್ತಿರ ಇದ್ದ ಸೋನಿ ಕ್ಯಾಮರಾದಲ್ಲಿ ನಾನು ಭಾವಚಿತ್ರ ತೆಗೆದೆನು. ನಂತರ ಸ್ಟುಡಿಯೋನಲ್ಲಿ ಕಲರ್ ಪ್ರಿಂಟ್ ಮಾಡಿಸಿ ಆನಂತರ ನಮ್ಮ ಮನೆಯಲ್ಲಿ ಇದ್ದ ಕಂಪ್ಯೂಟರ್ ನಲ್ಲಿ ತೆಗೆದ ಫೊಟೋವನ್ನು ಹಾಕಿ ಸಿ ಡಿ ಯಲ್ಲಿ ಕಾಪಿ ಮಾಡಿ ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೆನು. ಸಾಕ್ಷಿ ಸದರಿ ಭಾವಚಿತ್ರ ಮತ್ತು ಸಿ ಡಿ ಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು.8 ಮತ್ತು 8 ಎ ಎಂದು ಮಾನ್ಯ ಆರೋಪಿತರ ಪರ

ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. ಭಾವಚಿತ್ರ ಮತ್ತು ಸಿ ಡಿ ಯನ್ನು ನನ್ನ ಕ್ಯಾಮರಾ ಮತ್ತು ಕಂಪ್ಯೂಟರ್ ನಲ್ಲಿ ತೆಗೆದು ಕಾಪಿ ಮಾಡಿದ ಸಂಬಂಧ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಸದರಿ ದೃಢೀಕರಣ ಪತ್ರ ಹಾಗು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೃಢೀಕರಣ ಪತ್ರವನ್ನು ನಿಪಿ.8 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು ಗುರತಿಸಲಾಯಿತು. ಆರೋಪಿತರು ಈ ರೀತಿ ಮಾಡಿರುವ ಕಾರಣ ನಮ್ಮ ಊರಿನಲ್ಲಿ ನನ್ನ ಹೆಂಡತಿ ತಲೆ ಎತ್ತಿ ಓಡಾಡಲು ಕಷ್ಟವಾಗುತ್ತಿದೆ. ಆದ ಕಾರಣ ನನಗೆ ಬದುಕಲು ಆಗುವುದಿಲ್ಲ ಎಂದು ನನ್ನ ಹೆಂಡತಿ ನನಗೆ ತಿಳಿಸಿದ್ದಾಳೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>**

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.